

ಮೂಡಿಸಲು ಛಾಯಾಗ್ರಹಣ ಅತ್ಯುತ್ತಮ ಮಾಧ್ಯಮ ಎನಿಸಿತು. ಇಲ್ಲಿಂದಲೇ ನನ್ನ ಪ್ರಯತ್ನ ಆರಂಭಗೊಂಡಿತು. 2006ರಲ್ಲಿ ಮೊದಲ ಬಾರಿ ನನ್ನ ತಂದೆ ಕ್ಯಾಮೆರಾ ಕೊಡಿಸಿದರು. ಹುಲ್ಲುಗಾವಲಿನ ಜೀವಸಂಪತ್ತನ್ನು ಚಿತ್ರಗಳಲ್ಲಿ ಸೆರೆಹಿಡಿಯಲು ಆರಂಭಿಸಿದೆ. ಅಲ್ಲಿಂದ ಆರಂಭವಾದ ಪಯಣ ಭಾರತದ ಹಲವು ಕಡೆಗಳಿಗೆ ಕರೆದುಕೊಂಡು ಹೋಯಿತು' ಎಂದು ಛಾಯಾಗ್ರಹಣದ ಮೊದಲ ಹೆಜ್ಜೆಗಳನ್ನು ನೆನಪಿಸಿಕೊಂಡರು.

ಆದಿತ್ಯರ ತಂದೆ ರವೀಂದ್ರ ಕ್ಷೀರಸಾಗರ್ ಕೂಡ ಛಾಯಾಗ್ರಾಹಕರಾಗಿದ್ದುದು ಪ್ರೇರಣೆ ನೀಡಿತು. ಸ್ನೇಹಿತ ಅಮೋಲ್ ಲೋಖಂಡೆ ಮಾರ್ಗದರ್ಶನದೊಂದಿಗೆ ಛಾಯಾಗ್ರಹಣದ ಸೂಕ್ಷ್ಮಗಳು, ತಂತ್ರಗಳನ್ನು ಕಲಿಯಲು ಆರಂಭಿಸಿದರು ಆದಿತ್ಯ. ವನ್ಯಜೀವಿಗಳು ಹಾಗೂ ವನ್ಯಜೀವಿ ಛಾಯಾಗ್ರಹಣದ ಕುರಿತ ಹಲವು ಪುಸ್ತಕಗಳು ಅವರಿಗೆ ಮತ್ತಷ್ಟು ಹೊಳಹುಗಳನ್ನು ದಾಟಿಸಿದವು.

'ಪ್ರಕೃತಿಯೇ ನನ್ನ ಫೋಟೊಗ್ರಫಿಗೆ ಮಾಡೆಲ್' ಎಂದು ಹೇಳುವ ಆದಿತ್ಯ, ವನ್ಯಜೀವಿ ಛಾಯಾಗ್ರಹಣದಲ್ಲಿ ಪ್ರಯೋಗಗಳಿಗೆ ಅಡಿಯಿಟ್ಟರು. ತಾಂತ್ರಿಕ ವಿಷಯಗಳಿಂದ ಹಿಡಿದು, ಕಲಾಕೃತಿಗಳಂಥ ಚಿತ್ರಗಳನ್ನು ತೆಗೆಯುವ ಕಲೆಯನ್ನು ಕರಗತ ಮಾಡಿಕೊಂಡರು.

### ಕಾಡುಗಳ ಕಥೆ ಹೇಳಬೇಕು...

'ಕಾಡುಗಳನ್ನೇ ನೋಡದ, ಅದರ ಸೊಬಗಿನ ಗಂಧವೂ ಇಲ್ಲದ, ಅದರೊಳಗಿನ ಜೀವಜಗತ್ತನ್ನು, ವಿಸ್ಮಯಗಳನ್ನು ಕಾಣದ ಜನರಿಗೆ ನನ್ನ ಚಿತ್ರಗಳು 'ಕಾಡಿನ ಕಥೆ' ಹೇಳುವಂತಿರಬೇಕು ಎಂಬ ಹಂಬಲ ಹುಟ್ಟಿಕೊಂಡಿತು. ಆನಂತರ ಛಾಯಾಗ್ರಹಣ ಹವ್ಯಾಸ ಮಾತ್ರವಲ್ಲ, ನನ್ನ ಜೀವನದ ಭಾಗವೂ ಆಯಿತು. ಕಾಡುಗಳನ್ನು ಅಲೆಯುವುದು ಸಂತಸ ಕೊಡುವ ವಿಷಯವಾಯಿತು. ಪ್ರತಿ ಬಾರಿಯೂ ಹೊಸ ಹೊಸ ಅನುಭವಗಳು ಬೋನಸ್ ಆದವು' ಎಂದು ಉತ್ಸಾಹದಿಂದ ಹೇಳಿಕೊಳ್ಳುತ್ತಾರೆ ಆದಿತ್ಯ.

'ಸೃಷ್ಟಿಯ ಸೊಬಗು, ವನ್ಯ ಪ್ರಪಂಚ, ಪ್ರಾಣಿ ಪಕ್ಷಿಗಳ ಜೀವನಶೈಲಿ, ಅವುಗಳು ಬದುಕುವ ಕಲೆ, ಕೌಶಲಗಳು ಮನುಷ್ಯ ಎಷ್ಟು ಕ್ಷುಲ್ಲಕ ಎಂಬುದನ್ನು ತೋರಿಸಿವೆ' ಎಂದು ಅನುಭವದ ಪಾಠ ಹೇಳುತ್ತಾರೆ.

### ಕಾಮಿಡಿ ವೈಲ್ಡ್‌ಲೈಫ್ ಫೋಟೊಗ್ರಫಿ

ವನ್ಯಜೀವಿ ಸಂರಕ್ಷಣೆಯಲ್ಲಿ ತೊಡಗಿಕೊಂಡಿರುವ, ಛಾಯಾಗ್ರಹಣಸ್ಪರ್ಧೆ ಮೂಲಕ ವನ್ಯಜೀವಿ ಸಂರಕ್ಷಣೆಯ ಧ್ಯೇಯೋದ್ದೇಶದೊಂದಿಗೆ ಕಾರ್ಯನಿರ್ವಹಿಸುತ್ತಿರುವ ಪ್ರತಿಷ್ಠಿತ 'ದಿ ಕಾಮಿಡಿ ವೈಲ್ಡ್‌ಲೈಫ್' ಪ್ರತಿ ವರ್ಷವೂ ನಗು ಮೂಡಿಸುವ ವನ್ಯಜೀವಿ ಛಾಯಾಚಿತ್ರಗಳ ಸ್ಪರ್ಧೆಯನ್ನು ಹಮ್ಮಿಕೊಳ್ಳುತ್ತದೆ. ಕಳೆದ ವರ್ಷ ಈ ಸ್ಪರ್ಧೆಯ ಕೆಲವು ಫೋಟೊಗಳನ್ನು ನೋಡಿದ್ದ ಆದಿತ್ಯ ಅವರು ಕೂಡ ಸ್ಪರ್ಧೆಯಲ್ಲಿ ಭಾಗವಹಿಸಲು ತೀರ್ಮಾನಿಸಿದರು.

'ನನ್ನ ಆಲ್ಬಂನಲ್ಲಿದ್ದ ಹಲವು ಫೋಟೊಗಳನ್ನು ಜಾಲಾಡಿದೆ. ಅದರಲ್ಲಿ 'ಲಾಫಿಂಗ್ ಸ್ನೇಕ್' ಹಾಗೂ 'ಫ್ಯಾನ್ ಥ್ರೋಟೆಡ್ ಲಿಜಾರ್ಡ್' ಛಾಯಾಚಿತ್ರಗಳನ್ನು ಸ್ಪರ್ಧೆಗೆ ಕಳುಹಿಸಿದೆ. ಅಚ್ಚರಿ ಎಂಬಂತೆ ಎರಡೂ ಚಿತ್ರಗಳು ಅಂತಿಮ ಸುತ್ತಿಗೆ ಆಯ್ಕೆಯಾದವು. ಪ್ರಪಂಚದ ಮೂಲೆ ಮೂಲೆಯಿಂದ ಬಂದಿದ್ದ ಏಳು ಸಾವಿರ ಛಾಯಾಚಿತ್ರಗಳಲ್ಲಿ 42 ಚಿತ್ರಗಳನ್ನು ಅಂತಿಮ ಸುತ್ತಿಗೆ ಆಯ್ಕೆ ಮಾಡಲಾಗಿತ್ತು. ಅದರಲ್ಲಿ ನನ್ನ ಎರಡು ಚಿತ್ರಗಳಿದ್ದವು ಎಂಬುದು ಹೆಚ್ಚು ಖುಷಿ ಕೊಟ್ಟ ಸಂಗತಿ. ಸ್ಪರ್ಧೆಯಲ್ಲಿ ನನ್ನ ಚಿತ್ರಗಳಿಗೆ ಪ್ರಶಸ್ತಿ ಲಭಿಸಲಿಲ್ಲ. ಆದರೆ ವಿಶ್ವದಾದ್ಯಂತ ಹಲವರು ಫೋಟೊಗಳನ್ನು ಮೆಚ್ಚಿಕೊಂಡರು. ಛಾಯಾಗ್ರಾಹಕನಿಗೆ ಮೆಚ್ಚುಗೆಗಿಂತ ದೊಡ್ಡ ಪ್ರಶಸ್ತಿ ಬೇರೇನಿದೆ?' ಎನ್ನುವ ಸಾರ್ಥಕ ಭಾವ ಅವರದು.

'ಫೋಟೊಗ್ರಫಿಗೆ ಪ್ರತಿ ಬಾರಿ ಹೋದಾಗಲೂ ನನಗೆ ಅದು ಹೊಸ ದಿನವಾಗಿರುತ್ತದೆ ಹಾಗೂ ಚಿತ್ರ ತೆಗೆಯುವಾಗ ಹೊಸ ತಂತ್ರಗಳನ್ನು ಸದಾ ಪ್ರಯೋಗಿಸುತ್ತಿರುತ್ತೇನೆ. ಚಿತ್ರಗಳನ್ನು ಇನ್ನಷ್ಟು ಚೆಂದ ಕಾಣುವಂತೆ ಮಾಡಬಲ್ಲ ಅಂಶಗಳನ್ನು ಪ್ರತಿ ಬಾರಿಯೂ ಪ್ರಯತ್ನಿಸುತ್ತೇನೆ. ವನ್ಯಜೀವಿಗಳನ್ನು, ಅವುಗಳ ಜೀವನಶೈಲಿಯನ್ನು ಹತ್ತಿರದಿಂದ ಗಮನಿಸುವುದು ನನ್ನ ಅತಿ ಇಷ್ಟದ ಸಂಗತಿಯೂ ಆಗಿರುವುದರಿಂದ ಛಾಯಾಗ್ರಹಣಕ್ಕೆ ಇದು ಪ್ಲಸ್ ಪಾಯಿಂಟ್. ತಾಳ್ಮೆಯಿಂದಿದ್ದಷ್ಟೂ ಅತ್ಯುತ್ತಮ ಚಿತ್ರಗಳು ಸಿಗುವುದರಲ್ಲಿ ಅನುಮಾನವೇ ಇಲ್ಲ' ಎನ್ನುತ್ತಾರೆ.

ಛಾಯಾಗ್ರಹಣದ ಮೂಲಕ ವನ್ಯಲೋಕದ ಚೆಲುವನ್ನು ಬಿತ್ತರಿಸುವುದರೊಂದಿಗೆ ವನ್ಯಜೀವಿ ಸಂರಕ್ಷಣೆಯ ಸಂದೇಶವನ್ನು ಸಾರುವ, ಜಾಗೃತಿ ಮೂಡಿಸುವ ಇನ್ನಷ್ಟು ಪ್ರಯತ್ನಗಳೊಂದಿಗೆ ಕಾಡಿನ ಕಥೆ ಹೇಳುವ ಹಾದಿಯಲ್ಲಿದ್ದಾರೆ ಆದಿತ್ಯ.

ಪ್ರತಿಕ್ರಿಯಿಸಿ: feedback@sudha.co.in



